**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>**

**MVC- 176/2016** **RW-1**

| | |
|---|---|
| ಸಾಕ್ಷಿಯ ಹೆಸರು | : ಡಾಃ ಪ್ರಕಾಶ ಆಲೂರ |
| ತಂದೆ /ಗಂಡನ ಹೆಸರು | : ಶಿವಪ್ಪಾ |
| ವಯಸ್ಸು | : 44 ವರ್ಷ |
| ಉದ್ಯೋಗ | : ಡಾಕ್ಟರ |
| ವಾಸಸ್ಥಳ | : ಹೆಬ್ಬಳ್ಳಿ |

**ದಿಃ 07.01.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ 3 ನೇ ಎದುರುದಾರರ ಪರ ವಕೀಲರಿಂದಃ**

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿರುವ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ಮಲ್ಲಿಕಾರ್ಜುನ ಕಿತ್ತೂರ ಇವರು ದಿಃ 05-09-2015 ರಂದು ನನ್ನ ಆಸ್ಪತ್ರೆಗೆ ಬಂದು ಸದರಿ ಮಲ್ಲಿಕಾರ್ಜುನ ಕಿತ್ತೂರ ಇವರು ಬಿದ್ದು ಗಾಯಪಡಿಸಿಕೊಂಡಿದ್ದಾರೆ ಎಂದು ಅವರ ಸಹೋದರ ನನಗೆ ಹೇಳಿರುತ್ತಾರೆ. ನಾನು ಸದರಿ ಮಲ್ಲಿಕಾರ್ಜುನ ಕಿತ್ತೂರ ಇವರನ್ನು ಪರೀಕ್ಷಿಸಿ ಅವರನ್ನು ನನ್ನ ಕಡೆ ಆಗುವುದಿಲ್ಲಾ, ಮುಂದಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿರುತ್ತೇನೆ. ನಿಪಿ 15 ರ ಪ್ರಕಾರ ನಾನು ಹೆಚ್ಚಿನ ಚಿಕಿತ್ಸೆಗೆಗಾಗಿ ಎಸ್ ಡಿ ಎಂ ಆಸ್ಪತ್ರೆಗೆ ಕಳಿಸಿರುತ್ತೇನೆ. ಪ್ರಥಮ ಚಿಕಿತ್ಸೆ ಯ ಸಮಯದಲ್ಲಿ ನಮ್ಮ ಎಂ ಎಲ್ ಸಿ ಯಲ್ಲಿ ಗಾಯಗೊಂಡವರು ಅಥವಾ ಅವರ ಜೊತೆಗೆ ಬಂದವರ ಹೇಳಿಕೆಯ ಮೇರೆಗೆ ಯಾವ ಕಾರಣಕ್ಕೆ ಅವರಿಗೆ ಗಾಯ ಆಗಿದೆ ಎಂದು ಬರೆದುಕೊಳ್ಳುತ್ತೇವೆ. ನಿಪಿ 15 ರಲ್ಲಿ ಮಲ್ಲಿಕಾರ್ಜುನ ಕಿತ್ತೂರ ಇವರ ಸಹೋದರ ರಾಘವೇಂದ್ರ ಕಿತ್ತೂರ ಇವರ ಹೇಳಿಕೆಯ ಮೇರೆಗೆ ಮಲ್ಲಿಕಾರ್ಜುನ ಕಿತ್ತೂರ ಇವರು ಬಿದ್ದು ಗಾಯಪಡಿಸಿಕೊಂಡಿದ್ದಾರೆ ಎಂದು ಬರೆದಿರುತ್ತೇನೆ. ನಿಪಿ 15 ರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 15 (ಎ) ಎಂದು ಗುರುತಿಸಲಾಯಿತು. ನಿಪಿ 15 ರಲ್ಲಿ ಅಪಘಾತದಲ್ಲಿ ಮಲ್ಲಿಕಾರ್ಜುನ ಕಿತ್ತೂರ ಇವರಿಗೆ ಗಾಯ ಆಗಿದೆ ಎಂದು ಎಲ್ಲೂ ಬರೆದಿಲ್ಲಾ ಎಂದರೆ ಸರಿ.

**(ಪಾಟೀ ಸವಾಲುಃ ಅರ್ಜಿದಾರ ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಸಲಾಗಿ ಅವರು ನ್ಯಾಯಾಲಯದಲ್ಲಿ ಗೈರು ಹಾಜರಿ ಆಗಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀಮತಿ ಪದ್ಮಶ್ರೀ ಆರ್. ಪಾಟೀಲ)**
**3 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**